**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC-932/2019**

ದಿನಾಂಕ 30-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾ. ಸಂತೋಷ ಗಾರಂಪಳ್ಳಿ PW-2 |
| ತಂದೆಯ ಹೆಸರು | ಃ | ಶಿವಶರಣಪ್ಪ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿ, ಕುರಾಳ ಆಸ್ಪತ್ರೆ ಕಲ್ಬುರ್ಗಿ |
| ವಾಸಸ್ಥಳ | ಃ | ಕಲ್ಬುರ್ಗಿ |

**ಮುಖ್ಯ ವಿಚಾರಣೆ ಶ್ರೀ RSC ಅರ್ಜಿದಾರರ ಪರ ವಕೀಲರಿಂದ**

ನಾನು 2016 ರಿಂದ ಇಲ್ಲಿಯವರೆಗೆ ಕಲ್ಬುರ್ಗಿಯ ಕುರಾಳ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ ನಿರ್ವಹಿಸುತ್ತಿದ್ದೇನೆ.

ದಿನಾಂಕ 21-12-2017ರಂದು ರಾತ್ರಿ 08-30 ಗಂಟೆ ಸುಮಾರಿಗೆ ಗಾಯಾಳು ಸತೀಶಸಿಂಗ ತಂದೆ ಭಗವಾನಸಿಂಗರವರನ್ನು ಅವರ ಸಹೋದರನಾದ ದಿನೇಶರವರು ಚಿಕಿತ್ಸೆ ಕುರಿತು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಎಡಭುಜದ ಮತ್ತು ಎಡ ಪಾದದ ಮೇಲೆ ಊತ ಗಾಯವಿತ್ತು
2. ರಟ್ಟೆಯ humerus ಮೂಳೆಯಲ್ಲಿ ಸೆಳೆತವಿತ್ತು.
3. ಎಡಗಾಲಿನ ಕಿರುಬೆರಳಿನ ಮೂಳೆಯಲ್ಲಿ ಸೆಳೆತವಿತ್ತು.

2 ಮತ್ತು 3ನೇ ಗಾಯಗಳು ತೀವ್ರಸ್ವರೂಪದ ಗಾಯಗಳಾಗಿದ್ದವು. ಈ ವಿಚಾರವಾಗಿ ನಾನು ಚಿಕಿತ್ಸೆ ನೀಡಿರುತ್ತೇನೆ. ಸದರಿ ಸತೀಶಸಿಂಗರವರ ಆಸ್ಪತ್ರೆ ಬಿಡುಗಡೆಯ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯಿತು. ಠಾಣಾಧಿಕಾರಿ ಜೇವರ್ಗಿರವರು ನಮ್ಮ ಆಸ್ಪತ್ರೆಗೆ ಬರೆದ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಯಿತು. MLC Intimation ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು. ಗಾಯಾಳುವಿನ ಮಾಹಿತಿ

ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-21 ಎಂದು ಗುರುತಿಸಲಾಯಿತು.

ಸದರಿ ಗಾಯಾಳು ವೈದ್ಯರ ಸಲಹೆಯ ತಿರಸ್ಕರಿಸಿ ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತಾನೆ. ನಾನು ಮೇಲೆ ಹಾಜರುಪಡಿಸಿದ ದಾಖಲಾತಿಗಳನ್ನು ಹೊರತುಪಡಿಸಿ ಅರ್ಜಿದಾರರಿಗೆ ಸಂಬಂಧಿಸಿದ ಬೇರೆ ಯಾವುದೇ ದಾಖಲಾತಿಗಳು ನಮ್ಮಲ್ಲಿ ಇಲ್ಲ.

**ಪಾಟೀ ಸವಾಲುಃ ಶ್ರೀ ಆರ್.ಪಿ.ಕೆ. /ಬಿ.ಆರ್.ಪಿ. 3ನೇ ಎದುರುದಾರರ ಪರ ವಕೀಲರಿಂದ**

ಅರ್ಜಿದಾರರ ಆಸ್ಪತ್ರೆಯ ಬಿಡುಗಡೆಯ ದಾಖಲಾತಿಯಲ್ಲಿ ಗಾಯದ ಹಿನ್ನಲೆಯ ಬಗ್ಗೆ ಮಾಹಿತಿ ನಮೂದಾಗಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನಿಪಿ-18ರ ಬಿಡುಗಡೆಯ ಚೀಟಿಯನ್ನು ಸಂಬಂಧಪಟ್ಟ ವೈದ್ಯರು ನೀಡಿರುತ್ತಾರೆಂದು ನುಡಿಯುತ್ತಾರೆ. ಅರ್ಜಿದಾರರಿಗೆ ಪರಿಹಾರ ಧನ ಪಡೆಯಲು ಸಹಾಯವಾಗಲೆಂದು ನಮ್ಮ ಆಸ್ಪತ್ರೆಯ ದಾಖಲೆಗಳಲ್ಲಿ ರಸ್ತೆ ಅಪಘಾತದ ಪ್ರಕರಣ ಎಂದು ನಿಪಿ-20 ಹಾಗೂ ಇತರೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕರೆಯಿಸಲಾಗಿ ಗೈರುಹಾಜರಾದ ಕಾರಣ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿಗಿ